# ಅವರವರ ಧರ್ಮ

ಧರ್ಮ ಎನ್ನುವುದು ಸಾಮುದಾಯಿಕ ಆಗಿರುವಂತೆಯೇ ವೈಯಕ್ತಿಕವೂ ಹೌದು. ಸಮುದಾಯದ ಚೌಕಟ್ಟಿನಲ್ಲಿ ವ್ಯಕ್ತಿಯೊಬ್ಬನನ್ನು ನಿರ್ದಿಷ್ಟ ಧರ್ಮದ ಹಿನ್ನೆಲೆಯಲ್ಲಿ ಗುರ್ತಿಸಲಾಗುತ್ತದೆ. ಅದೇ ಸಮಯದಲ್ಲಿ ವ್ಯಕ್ತಿ ಖಾಸಗಿನೆಲೆಯಲ್ಲಿ ತನ್ನದೇ ಆದ ಧರ್ಮವೊಂದನ್ನು ಕಂಡುಕೊಳ್ಳಬೇಕಾಗುತ್ತದೆ. ಸಾಮುದಾಯಿಕ ಧರ್ಮ ವೈಯಕ್ತಿಕ ನೆಲೆಯಲ್ಲಿ ವಿಕಸನಗೊಳ್ಳದೆ ಹೋದರೆ ಅದು ಜಡವಾಗಿ ಅಭಿವ್ಯಕ್ತಗೊಳ್ಳುವ ಸಾಧ್ಯತೆಗಳೇ ಹೆಚ್ಚು.

ವೈಯಕ್ತಿಕ ಧರ್ಮ ಹೇಗಿರಬೇಕು? ಈ ಪ್ರಶ್ನೆಗೆ ಉತ್ತರವಾಗಿ ಮಹಾಭಾರತದ ಧರ್ಮವ್ಯಾಧನ ಕಥೆ ಗಮನಿಸಬಹುದು. ಕೌಶಿಕ ಎನ್ನುವ ಋಷಿ ತಪಸ್ಸಿನಲ್ಲಿ ಮಗ್ನನಾಗಿದ್ದಾಗ, ತನ್ನ ಮೇಲೆ ಹೇಸಿಗೆ ಮಾಡಿದ ಪಕ್ಷಿಯ ಬಗ್ಗೆ ಕೋಪಗೊಂಡು ಕೆಕ್ಕರಿಸಿನೋಡುತ್ತಾನೆ. ತಪೋಬಲದ ಉರಿಗೆ ಪಕ್ಷಿ ಸುಟ್ಟುಹೋಗುತ್ತದೆ. ತಪಸ್ಸಿನಿಂದ ಎದ್ದ ಕೌಶಿಕನಿಗೆ ಹಸಿವೆಯಾಗಿ, ಭಿಕ್ಷೆ ಬೇಡಲು ಹೋಗುತ್ತಾನೆ. ಮನೆಯೊಡತಿಗೆ ಒಳಗೇನೊ ಕೆಲಸ. ವಿಳಂಬವಾಗಿ ಭಿಕ್ಷೆ ತಂದ ಆಕೆಯನ್ನು ಮುನಿ ಕೆಕ್ಕರಿಸಿ ನೋಡುತ್ತಾನೆ. ಅವಳೇನೂ ಅಳುಕುವುದಿಲ್ಲ. 'ನಿನ್ನ ಉರಿಗಣ್ಣಿಗೆ ಬೆಂದುಹೋಗಲು ನಾನು ಬಲಾಕ ಪಕ್ಷಿಯಲ್ಲ' ಎಂದು ನಗುತ್ತಾಳೆ. ಕಾಡಿನ ವಿದ್ಯಮಾನ ನಾಡಿನ ಹೆಣ್ಣಿಗೆ ತಿಳಿದುದು ಹೇಗೆ? ಮುನಿಯ ಪ್ರಶ್ನೆಗೆ ಆಕೆ ಉತ್ತರಿಸುತ್ತಾಳೆ: 'ನೀನು ವೇದಗಳನ್ನು ತಿಳಿದಿರಬಹುದು. ಧರ್ಮಸೂಕ್ಷ್ಮಗಳ ಬಗ್ಗೆ ತಿಳಿದಿಲ್ಲ. ಧರ್ಮಸೂಕ್ಷ್ಮಗಳ ಬಗ್ಗೆ ಹೆಚ್ಚಿನ ಆಸಕ್ತಿಯಿದ್ದರೆ ಮಿಥಿಲಾ ನಗರದ ಧರ್ಮವ್ಯಾಧನನ್ನು ಭೇಟಿ ಮಾಡು'. ಅವಳ ಸೂಚನೆಯಂತೆ ಮಿಥಿಲೆಗೆ ತೆರಳಿದ ಕೌಶಿಕನಿಗೆ – 'ನಾನು ಆಚರಿಸುವ ಧರ್ಮದ ಕುರಿತಷ್ಟೇ ತಮಗೆ ಹೇಳಬಲ್ಲೆ' ಎಂದ ಧರ್ಮವ್ಯಾಧ, ಕೌಶಿಕನಿಗೆ ಹೇಳಿದ ಸಂಗತಿಗಳು ನಮ್ಮೆಲ್ಲರ ಬದುಕಿಗೂ ಸಂಬಂಧಿಸಿದವು. ಸುಳ್ಳು ಹೇಳದಿರುವುದು. ಇತರರಿಗೆ ತೊಂದರೆಯಾಗದಂತೆ, ನೋವಾಗದಂತೆ ಸೈರಣೆಯಿಂದ ವರ್ತಿಸುವುದು. ಮಾಡುವ ಕೆಲಸದಲ್ಲಿ ನಿಷ್ಠೆ. ಅಪ್ಪ–ಅಮ್ಮನ ಸೇವೆ. ಯಾರಿಗೂ ಮೋಸ ಮಾಡದಿರುವುದು. ಸುಳ್ಳು ಹೇಳದಿರುವುದು. ಇವು, ಧರ್ಮವ್ಯಾಧ ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಧರ್ಮಸೂಕ್ಷ್ಮಗಳು.

ಮಾಂಸ ವಿಕ್ರಯಿಸುವುದು ಧರ್ಮವ್ಯಾಧನ ವೃತ್ತಿ. ತನ್ನ ವೃತ್ತಿಯ ಬಗ್ಗೆ ಅವನಿಗೆ ಗೌರವವಿದೆ. ಸಹಸ್ರಾರು ಸಂಗಾತಿಯರಿದ್ದೂ ಇಂದ್ರಿಯನಿಗ್ರಹ ಸಾಧಿಸಿದ್ದ ಶ್ರೀಕೃಷ್ಣನಂತೆ, ಮಾಂಸ ವ್ಯಾಪಾರ ಮಾಡಿಯೂ ಅಹಿಂಸೆಯ ಅನುಸರಣೆ ಅವನಿಗೆ ಸಾಧ್ಯವಾಗಿದೆ. ತನ್ನ ಬದುಕಿನ ಸುಖ ಇರುವುದು ಇತರರನ್ನೂ ನೆಮ್ಮದಿಯಿಂದ ಬಾಳಲು ಅವಕಾಶ ಕಲ್ಪಿಸುವುದರಲ್ಲಿ ಎನ್ನುವುದು ಅವನಿಗೆ ತಿಳಿದಿದೆ. ಮುಖ್ಯವಾಗಿ, ಕುಟುಂಬವನ್ನು ಸಲಹುವುದರಲ್ಲಿ – ಅಪ್ಪ ಅಮ್ಮನ ಸೇವೆಯಲ್ಲಿ – ತನ್ನ ಸುಖ ಕಾಣುತ್ತಿದ್ದಾನೆ. ಇದು ಧರ್ಮವ್ಯಾಧನ ಧರ್ಮ.

ಕೌಶಿಕ ಮುನಿ ವೇದಗಳನ್ನು ಬಲ್ಲವನು. ಆದರೆ, ಹೆತ್ತವರನ್ನು ಸಲಹಬೇಕು ಎನ್ನುವ ಜೀವನಧರ್ಮಕ್ಕೆ ಬೆನ್ನುಮಾಡಿದವನು. ತಪಸ್ವಿಯಾದರೂ ಕೋಪವನ್ನು ಗೆಲ್ಲಲು ಸೋತು ಬಡಪಾಯಿ ಪಕ್ಷಿಯ ಸಾವಿಗೆ ಕಾರಣನಾದವನು. ಧರ್ಮವ್ಯಾಧನ ಮೂಲಕ 'ವೈಯಕ್ತಿಕ ಧರ್ಮ'ದ ಬಗ್ಗೆ ಕಣ್ತೆರೆಯುವ ಕೌಶಿಕ, ಮಾತಾಪಿತರ ಸೇವೆಗಾಗಿ ಮನೆಗೆ ಮರಳಿದನಂತೆ.

ಧರ್ಮವ್ಯಾಧನ ಪುಟ್ಟ ಕಥೆ ಧರ್ಮದ ಬೃಹದ್ದರ್ಶನವನ್ನು ಕರುಣಿಸುವಂತಿದೆ. ಜಪತಪಗಳು ಧರ್ಮದ ಆಚರಣೆಯ ರೂಪಗಳಷ್ಟೇ. ಅವುಗಳಿಗೆ ಇರುವಷ್ಟೇ ಮೌಲ್ಯ ನಾವು ಮಾಡುವ ಕೆಲಸಗಳಿಗೂ ಇದೆ ಎನ್ನುವುದು ಕಥೆಯ ಒಳಮಾತು. ಬಿಡಿಸಿ ಹೇಳುವುದಾದರೆ, ಮಾಡುವ ಕೆಲಸದಲ್ಲಿ ಬದ್ಧತೆ, ಪ್ರಾಮಾಣಿಕತೆ ಅಗತ್ಯ. ಶರಣರ 'ಕಾಯಕವೇ ಕೈಲಾಸ' ಪರಿಕಲ್ಪನೆಯ ಅರ್ಥವೂ ಇದುವೇ. 'ಜಾಡಮಾಲಿಯ ಕೆಲಸ ನಿನ್ನದಾದರೆ, ನೀನು ಗುಡಿಸುವ ಬೀದಿ ವಿಶ್ವದ ಅತ್ಯಂತ ಸ್ವಚ್ಛ ಬೀದಿಯಾಗಿರಲಿ' ಎನ್ನುವುದು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಮಾತು.

ಇಂದಿನ ಅನೇಕ ಬಿಕ್ಕಟ್ಟುಗಳಿಗೆ ವೈಯಕ್ತಿಕ ಧರ್ಮಗಳ ಪಾಲನೆಯಲ್ಲಿ ಏರುಪೇರಾಗಿರುವುದೂ ಒಂದು ಕಾರಣ. ನಾವು ಮಾಡುವ ಕಾಯಕಕ್ಕೂ ಸಾಮುದಾಯಿಕವಾದ ಧರ್ಮಕ್ಕೂ ತಾಳಮೇಳ ತಪ್ಪಿಹೋಗಿದೆ. ಬಹಿರಂಗದ ಅಶುದ್ಧಿ ಅಂತರಂಗವನ್ನೂ ರಾಡಿಯಾಗಿಸುತ್ತಿದೆ. ಬಹಿರಂಗದ ಮಾಲಿನ್ಯವನ್ನು ತೊಳೆಯುವ ಆರ್ದ್ರತೆಯನ್ನು ನಮ್ಮ ಅಂತರಂಗಕ್ಕೆ ದಕ್ಕಿಸಿಕೊಡುವಲ್ಲಿ ನಾವು ಯಶಸ್ವಿಯಾಗಿಲ್ಲ. ಅಂತರಂಗ ಮತ್ತು ಬಹಿರಂಗಗಳ ಶುದ್ಧಿಗೆ ಪರಸ್ಪರ ಸಂಬಂಧವಿದೆ. ಆ ಶುದ್ಧಿಯ ಸ್ವರೂಪದ ಕುರಿತು ಬಸವಣ್ಣ ಹೇಳುತ್ತಾರೆ: 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ / ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ / ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ / ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ'. ಬೇರೆ ಮಾತೇಕೆ – ಈ ಒಳಗಣ ಹೊರಗಣ ಶುದ್ಧಿಯೇ 'ಕೂಡಲಸಂಗಮದೇವನ ಒಲಿಸುವ ಪರಿ'.

ರಾಜಕಾರಣಿಯ ಧರ್ಮವನ್ನು ವಿದ್ಯಾರ್ಥಿಯೂ, ಧರ್ಮಗುರುಗಳ ಧರ್ಮವನ್ನು ರಾಜಕಾರಣಿಗಳೂ, ವ್ಯಾಪಾರಿಗಳ ಧರ್ಮವನ್ನು ರಾಜಕಾರಣಿಗಳೂ – ಹೀಗೆ ವೈಯಕ್ತಿಕ ಧರ್ಮಗಳಲ್ಲಿ ಪಾತ್ರ ಬದಲಾವಣೆಯನ್ನು ಕಾಣುತ್ತಿದ್ದೇವೆ. ಧರ್ಮನಿಷ್ಠೆಯ ಮಾತನಾಡುವ ಅನೇಕರಿಗೆ ತಮ್ಮ ಧರ್ಮ ಯಾವುದೆನ್ನುವುದರ ಅರಿವೇ ಸ್ಪಷ್ಟವಾಗಿಲ್ಲ. ಧರ್ಮದ ಹೆಸರಿನಲ್ಲಿ ಅವರು ಆಚರಿಸುತ್ತಿರುವುದು ಅಧರ್ಮವನ್ನಷ್ಟೇ. 'ದಯೆಯೇ ಧರ್ಮದ ಮೂಲವಯ್ಯ' ಎಂದರು ಬಸವಣ್ಣ. ಆ ದಯೆ ಒಸರಬೇಕಾದುದು ನಮ್ಮ ಬದುಕಿನಿಂದಲೇ. ಜೀವನದಿಂದ ಹುಟ್ಟಿದ ದಯೆ, ಧರ್ಮದಲ್ಲೂ ಸಮಾಜದಲ್ಲೂ ಪ್ರತಿಫಲಿಸುತ್ತದೆ.

ನಾವಿಂದು ಮಾತನಾಡುತ್ತಿರುವುದು ಸಾಮುದಾಯಿಕ ಧರ್ಮದ ಬಗ್ಗೆ. ಹಿಂದೂ ಮುಸ್ಲಿಂ ಕ್ರೈಸ್ತರೆಂದು ಸಮುದಾಯಗಳನ್ನು ಗುರ್ತಿಸುತ್ತೇವೆ. ಈ ಸಮುದಾಯಗಳ ಒಳಗಿದ್ದೂ ನಮ್ಮನ್ನೆಲ್ಲ ಬೆಸೆದಿರುವ ಮಾನವಧರ್ಮ ಒಂದಿರುವುದನ್ನು ನಿರ್ಲಕ್ಷಿಸುತ್ತೇವೆ. ಈ ಮಾನವಧರ್ಮ ಮುನ್ನೆಲೆಗೆ ಬರುವಂತಾಗುವಲ್ಲಿ ವೈಯಕ್ತಿಕ ಧರ್ಮದ ಪಾತ್ರ ಮಹತ್ವದ್ದು. ಬದುಕಿನಿಂದ ಹುಟ್ಟುವ ಮಾನವಧರ್ಮವನ್ನು ಬದಿಗಿಟ್ಟು, ಪಥ್ಯ ಪರಂಪರೆಗಳ 'ಧರ್ಮ'ಕ್ಕಷ್ಟೇ ಜೋತುಬಿದ್ದರೆ ಬದುಕಿನಲ್ಲಿ ನೆಮ್ಮದಿ ಕ್ಷೀಣವಾಗತೊಡಗಿ, ಹಿಂಸೆ ಮುನ್ನೆಲೆಗೆ ಬರತೊಡಗುತ್ತದೆ. ಮಾಡುವ ಕೆಲಸದಲ್ಲಿ ಪ್ರಾಮಾಣಿಕತೆಯನ್ನೂ ಪ್ರೀತಿಯನ್ನೂ ರೂಢಿಸಿಕೊಂಡಾಗ, ಬದುಕಿನ ಬಹುತೇಕ ಸಿಕ್ಕುಗಳು ತಿಳಿಯಾಗುತ್ತವೆ. ಸಂಬಂಧಗಳು ಪ್ರಾಂಜಲವಾಗಿದ್ದಾಗ, ಆರ್ದ್ರತೆಯಿಂದ ಕೂಡಿದ್ದಾಗ ಅದರ ಪ್ರತಿಫಲನವನ್ನು ಸಮಾಜವನ್ನೂ ನೋಡುವ ದೃಷ್ಟಿಕೋನದಲ್ಲೂ ಗುರ್ತಿಸಬಹುದು. ಕೆಲಸದಲ್ಲಿ ಮತ್ತು ಸಂಬಂಧಗಳಲ್ಲಿ ಅಡ್ಡದಾರಿ ಹಿಡಿದರೆ, ನಮ್ಮ ಲೋಕದೃಷ್ಟಿ ಸಂಕುಚಿತಗೊಳ್ಳುತ್ತದೆ. 'ಸಂಬಂಜ ದೊಡ್ಡದು ಕನಾ' ಎನ್ನುವ ದೇವನೂರ ಮಹಾದೇವರ ಮಾತಿಗಿಂತ ಮಿಗಿಲಾದ ಜೀವನಧರ್ಮದ ಕಾಣ್ಕೆ ಮತ್ತೊಂದಿದಿಯೆ?

■ **ಚಂಪಕಮಾಲಾ**

## ಮಾತೇ ಮುತ್ತು

- ನಮ್ಮ ಧರ್ಮಗಳು ನಮಗೆ ಕೂಡಿ ಬಾಳಲು ಕಲಿಸದೇ ಇದ್ದರೆ ಆ ಧರ್ಮಗಳು ಏಕೆ?

  –ಸಿದ್ದೇಶ್ವರ ಸ್ವಾಮೀಜಿ

- ಶಕ್ತಿಹೀನರು ಯಾವತ್ತೂ ಕ್ಷಮಿಸುವುದಿಲ್ಲ, ಕ್ಷಮೆ ಅನ್ನುವುದು ಶಕ್ತಿಶಾಲಿಗಳ ಸ್ವತ್ತು.

  –ಗಾಂಧೀಜಿ

- ಬೇರೆಯವರ ಭಾವನೆಗಳ ಜೊತೆ ಆಟ ಆಡಬೇಡಿ, ನೀವು ಆಟದಲ್ಲಿ ಗೆಲ್ಲಬಹುದು. ಆದರೆ ಜೀವನ ಪೂರ್ತಿ ಆ ಜೀವವನ್ನು ಕಳೆದುಕೊಳ್ಳಬಹುದು.

  –ಶೇಕ್ಸ್‌ಪಿಯರ್

- ಅಹಂಕಾರಿ ಮನುಷ್ಯ ಒಂಟಿಯಾಗಿರಬೇಕಾಗುತ್ತದೆ.

  –ಚೆನ್ನವೀರ ಕಣವಿ

- ಮನುಷ್ಯ ಸುಳ್ಳಿನ ಜೊತೆ ಹೊಂದಾಣಿಕೆ ಮಾಡಿಕೊಂಡು ಜೀವನದ ಅತ್ಯಂತ ಮಹತ್ವದ ಸಂಪತ್ತನ್ನು ಕಳೆದುಕೊಳ್ಳುತ್ತಾನೆ.

  –ಹರಿಶ್ಚಂದ್ರ

- ಯಾರು ಕತ್ತಿಯನ್ನು ಹಿಡಿದಿರುತ್ತಾನೋ ಅವನು ಒಂದಲ್ಲ ಒಂದು ದಿನ ಕತ್ತಿಗೆ ತನ್ನ ಕತ್ತನ್ನು ಒಪ್ಪಿಸಬೇಕಾಗುತ್ತದೆ.

  –ಸಾಕ್ರೆಟಿಸ್